# ಯೆರೂಸಲೇಮಿನಲ್ಲಿ ತಿರಸ್ಕಾರ ಹೊಂದಿದನು

## (22:30-23:15)

ಯೇಸು ದೇವಾಲಯದಲ್ಲಿ ತನ್ನ ಕಡೇಯ ಹಾಗೂ ಬಹಿರಂಗ ಸಭೆಯಲ್ಲಿ ಮಾತನಾಡುತ್ತಿದ್ದನು. ಅದರ ಅಂತ್ಯದಲ್ಲಿ, ಒಂದು ಕ್ಷಣ ಯೆರೂಸಲೇಮಿನ ನಿವಾಸ ಸ್ಥಳವನ್ನು ಗಮನಿಸಿದನು. ನಂತರ, ಭಾರವಾದ ಹೃದಯದಿಂದ, ತನ್ನನ್ನು ತಿರಸ್ಕರಿಸಿದ ಯೆರೂಸಲೇಮಿಗೆ ವಿದಾಯ ಹೇಳಿದನು:

> ಯೆರೂಸಲೇಮೇ, ಯೆರೂಸಲೇಮೇ, ಪ್ರವಾದಿಗಳ ಪ್ರಾಣ ತೆಗೆಯುವವಳೇ, ದೇವರು ನಿನ್ನ ಬಳಿಗೆ ಕಳುಹಿಸಿಕೊಟ್ಟವರನ್ನು ಕಲ್ಲೆಸೆದು ಕೊಲ್ಲುವವಳೇ, ಕೋಳಿ ತನ್ನ ಮರಿಗಳನ್ನು ರೆಕ್ಕೆಗಳ ಕೆಳಗೆ ಕೂಡಿಸಿಕೊಳ್ಳುವಂತೆ ನಿನ್ನ ಮಕ್ಕಳನ್ನು ಕೂಡಿಸಿಕೊಳ್ಳುವದಕ್ಕೆ ನನಗೆ ಎಷ್ಟೋ ಸಾರಿ ಮನಸ್ಸಿತ್ತು; ಆದರೆ ನಿಮಗೆ ಮನಸ್ಸಿಲ್ಲದೆ ಹೋಯಿತು. ನೋಡಿರಿ, ನಿಮ್ಮ ಆಲಯವು ನಿಮಗೆ ಬರೀದಾಗಿ ಬಿಟ್ಟದೆ. ಈಗನಿಂದ - ಕರ್ತನ ಹೆಸರಿನಲ್ಲಿ ಬರುವವನಿಗೆ ಆಶೀರ್ವಾದ ಎಂದು ನೀವು ಹೇಳುವತನಕ ನೀವು ನನ್ನನ್ನು ನೋಡುವದೇ ಇಲ್ಲವೆಂದು ನಿಮಗೆ ಹೇಳುತ್ತೇನೆ ಅಂದನು[1] (ಮತ್ತಾಯ 23:37-39).[2]

ಕ್ರಿ.ಪೂ. 1000ರ ದಲ್ಲಿ, ಅರಸನಾದ ದಾವೀದನು ಯೆರೂಸಲೇಮನ್ನು ವಶಪಡಿಸಿಕೊಂಡು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಅವನು ದೇವ ಮಂಜೂಷವನ್ನು ಪಟ್ಟಣಕ್ಕೆ ತಂದಾಗ, ನಂತರದಲ್ಲಿ ಅವನ ಮಗನಾದ ಸೊಲೋಮೋನನು ಅದಕ್ಕಾಗಿ ಒಂದು ದೇವಾಲಯವನ್ನು ಕಟ್ಟಿಸಿದನು. ಅದು ಇಸ್ರಾಯೇಲ್ಯರಲ್ಲಿ "ದೇವರ ಪಟ್ಟಣವೆಂದು" ಪ್ರಖ್ಯಾತಿಗೊಂಡಿತ್ತು. ಕ್ರಿ.ಪೂ. 586ರಲ್ಲಿ ಬಾಬಿಲೋನಿನವರು ಅದನ್ನು ನಾಶಮಾಡಿದಾಗ, ಸೆರೆ ಹೋದ ಯೆಹೂದ್ಯರು ಆ ಪಟ್ಟಣಕ್ಕಾಗಿ ದುಃಖಿಸುತ್ತಿದರು. ಸಾಧ್ಯ ವಾದಷ್ಟು ಬೇಗ ಅದನ್ನು ಪುನಃ ನಿರ್ಮಾಣ ಮಾಡಿದರು. ಒಂದು ಸಾವಿರ ವರ್ಷಗಳ ಕಾಲ ಅದು ಯೆಹೂದ್ಯರಿಗೆ ಧಾರ್ಮಿಕ, ಸಾಮಾಜಿಕ, ಮತ್ತು ರಾಜಕೀಯ ಕೇಂದ್ರವಾಗಿತ್ತು. ಆದರೆ ಅದರಲ್ಲಿನ ಜನರು ದೇವರಿಗೆ ವಿರೋಧ ವಾದ್ದರಿಂದ, ಅದರ ನಾಶನವು ಹತ್ತಿರವಾಗಿದೆ ಎಂದು ಯೇಸು ಮುಂತಿಳಿಸಿದನು. ದೇವರ ಅಂತಿಮವಾದ ಯೋಜನೆಯಲ್ಲಿ, ಯೆರೂಸಲೇಮು ಉಳಿಯುವಂತ ಪಾಠವನ್ನು ಮುಂದೇ ನೋಡುತ್ತೇವೆ.

ಅವನ ಇತರೆ ಸೇವಾ ಪ್ರಯಾಣದಂತೆ, ಪೌಲನು ಯೆರೂಸಲೇಮಿನಲ್ಲಿ ಕೆಲವು ಕಾಲ ತಂಗಿದ್ದನು, ಆದಾಗ್ಯೂ "ಅಲ್ಲಿ ಯಾವುದೇ ವಿಧವಾದ ನೂತನ ಸಭೆಗಳು ಸ್ಥಾಪನೆಗೊಳ್ಳಲಿಲ್ಲ" ಮತ್ತು ಯಾವುದೇ ದೈವೀಕ ಶಾಸ್ತ್ರದ ಹಾಗೂ ಕ್ರೈಸ್ತ ಧರ್ಮ ಸಿದ್ಧಾಂತಗಳನ್ನಾಗಲೀ, ಪರಿಹರಿಸಲಿಲ್ಲ.[3] ಇದಕ್ಕೆ ಲೂಕನಲ್ಲಿ ಕಾರಣವಿತ್ತು ಎಂದು ಅನೇಕ ವಿವರಣೆಕಾರರು ಹೇಳುವರು. "ಇಸ್ರಾಯೇಲ್ಯರು ಸುವಾರ್ತೆಯನ್ನು ನಿರಾಕರಿ ಸಿದರ ಕುರಿತು ಈ ಅಧ್ಯಾಯದಲ್ಲಿ ಪ್ರಮುಖ ದೃಷ್ಟಾಂತವನ್ನು ನೀಡಲಾಗಿದೆ ಎಂಬ ನಂಬಿಕೆಯಿದೆ."[4]

> ಪೌಲನು ಯೆರೂಸಲೇಮಿನ ಸಂದರ್ಶನವು ಪ್ರಮುಖವೆಂದು ತಿಳಿಸದೆ, ಯೆರೂಸಲೇಮಿನವರು ಸುವಾರ್ತೆಯನ್ನು ತಿರಸ್ಕರಿಸಿದರು ಎಂಬುದನ್ನು ಸೂಚಿಸಲು, ಯೆರೂಸಲೇಮಿನ ಪ್ರಾಮುಖ್ಯತೆಯನ್ನು ಲೂಕನು ತಿಳಿಸಿದನು.[5]

ಒಂದು ಉದ್ದೇಶವು ... ಜಮಲಿಗೆ ತೋಲಿಸುವುದಕ್ಕಾಗಿ ... ದೇವರು ಯೂದ ಮತದೊಂದಿಗಿದ್ದರು, ಮತ್ತು ಯೂದ ಜನಾಂಗವು, ಒಂದು ರಾಜ್ಯವಾಗಿ, ದೇವರೊಂದಿಗಿದ್ದರು .. ಮತ್ತಾಯ 24, ಮಾರ್ಕ13, ಲೂಕ 21ರಲ್ಲಿ ಕರ್ತರು ಮುನ್ಸೂಚನೆಯಾಗಿ ಹೇಳಿದಂತೆ ಇಲ್ಲಿ ಹೇಳಲ್ಪಟ್ಟಿದೆ ದೇವರು ಯೆರೂಸಲೇಮಿನ ಮೇಲೆ ನಾಶನವನ್ನು ತರುವನೆಂದು ನೋಡಬಹುದು. ಹಾಗಾದರೆ ನೀವು ಪ್ರವಾದಿಗಳನ್ನು ಕೊಂದವರ ಮಕ್ಕಳೇ ಹೌದು ಎಂಬುದಕ್ಕೆ ನಿಮಗೆ ನೀವೇ ಸಾಕ್ಷಿಗಳಾಗಿದ್ದೀರಿ. ಒಳ್ಳೇದು, ನೀವು ನಿಮ್ಮ ಹಿರಿಯರ ಪಾಪದ ಅಳತೆಯನ್ನು ಪೂರ್ತಿಮಾಡಿರಿ (ಮತ್ತಾಯ 23:31-32).[6]

ಆ ಜನಾಂಗದ ಜನರು ಈಗಾಗಲೇ ಮೂರು ಭಯಂಕರವಾದ ಕೊಲೆಗಳನ್ನು ಮಾಡಿದ್ದರು: ಸ್ನಾನಿಕನಾದ ಯೋಹಾನ, ಕ್ರಿಸ್ತನು, ಹಾಗೂ ಸ್ತೆಫನನನ್ನು. ರೋಮಾಯರು ಮಧ್ಯವರ್ತಿಗಳಾಗದೆ ಇದ್ದಿದ್ದರೆ. ಪೌಲನ ಕೊಲೆಯು ನಾಲ್ಕನೆಯದಾಗುವ ಸಾಧ್ಯತೆಯಿತ್ತು. ಈಗ ಇಸ್ರಾಯೇಲ್ ಪ್ರತ್ಯೇಕಗೊಂಡಿತ್ತು: ... ಮತ್ತು ಅದರ ಪರೀಕ್ಷಣೆ ಅಂತ್ಯಗೊಂಡಿತು.[7]

ಯೆಹೋವನು, ದೀರ್ಘಶಾಂತನು ಎಂದು ಸತ್ಯವೇದ ತಿಳಿಸುತ್ತದೆ, ಆದಾಗ್ಯೂ ಆತನ ತಾಳ್ಮೆಗೆ ಒಂದು ಅಂತ್ಯವಿದೆ. ಅವರ ಅವಿಧೇಯತೆಯನ್ನು ಇಲ್ಲಿಯವರೆಗೆ ಮಾತ್ರ ಸಹಿಸಿಕೊಂಡಿದ್ದನು. ನಂತರ ಆತನು, "ಇಷ್ಟು ಸಾಕು! ಇನ್ನು ನೀವು ಮುಂದುವರಿಯ ಬಾರದು!" ಅಂದನು. ಅಂತಿಮವಾಗಿ ದೇವರು ಇಸ್ರಾಯೇಲ್ಯರಿಗೆ ಇಷ್ಟು ಸಾಕು ಎಂಬುದಾಗಿ ಹೇಳಿದ ವಿಚಾರವನ್ನು ಈ ಪಾಠದಲ್ಲಿ ನೋಡೋಣ.

## ವಿಭಜನೆಗೊಂಡ ಮಂಡಳಿ (22:30-23:10)

ರೋಮಾಯರ ಸಹಸ್ರಾಧಿಪತಿಯು ಯೆರೂಸಲೇಮನ್ನು ಆಕ್ರಮಿಸಿದ್ದನು. ರೋಮಾಯದ ಹಕ್ಕುದಾರನು ಬಂಧನಕ್ಕೊಳಗಾಗಿದ್ದನು; ರೋಮಾ ಹಕ್ಕುದಾರನಿಗೆ ಮಾಹಿತಿ ನೀಡದೆ, ಬಂಧನ ಮಾಡುವದು ನಿಯಮ ಬಾಹಿರವಾದ ಸಂಗತಿಯಾಗಿತ್ತು, ಆದರೆ ಮನುಷ್ಯನಾದರೂ ಮಾಡಿದ ಅಪರಾದವನ್ನು ಸಹಸ್ರಾಧಿಪತಿಯು ಅರಿಯದವನಾಗಿದ್ದನು. ಸತ್ಯವನ್ನರಿಯುವ ಮೂರು ಪ್ರಯತ್ನಗಳನ್ನು ಅಧಿಕಾರಿಯು ಈಗಾಗಲೇ ಮಾಡಿದ್ದನು: ದೊಂಬಿ ಜನರಿಂದ ಬಿಡಿಸಿದ್ದು. ಅಲ್ಲಿದ್ದ ಸಮಸ್ಯೆಯ ಕುರಿತು ಕೇಳಿದ್ದಾಗ್ಯೂ, ಅವನು ಉತ್ತರವನ್ನು ಹೊಂದಿರಲಿಲ್ಲ. ಅಪರಾಧಿಯು ಆ ಜನರೊಂದಿಗೆ ಮಾತನಾಡುವ ಸ್ವತಂತ್ರವನ್ನು ನೀಡಿದ್ದನು, ಅವನು ತನ್ನ ಮಾತನ್ನು ಅಂತ್ಯಗೊಳಿಸುವಾಗ, ಅಧಿಕಾರಿಯು ಅವನನ್ನು ಅರ್ಥಮಾಡಿಕೊಳ್ಳಲಿಲ್ಲ. ಆ ಸೆರೆಯಾಳಿನಿಂದ ಸತ್ಯವನ್ನು ಅವನು ಸಂಗ್ರಹಿಸುವಾಗ, ಅಪರಾಧಿಯು ರೋಮಾ ಹಕ್ಕುದಾರನೆಂದು ತಿಳಿದ್ದು ಗಾಬರಿಗೊಂಡನು.

ಅವನಿಗೆ ನೀಡಬಹುದಾದ ಶಿಕ್ಷೆಯ ಬಗ್ಗೆ, ಅಧಿಕಾರಿಯು ರಾತ್ರಿಯಲ್ಲಾ ಚಿಂತಿಸಿರಬಹುದು, ಬೆಳಗಾಗುವದರಲ್ಲಿ ಅದಕ್ಕೆ ಪರಿಹಾರ ತಿಳಿದೆನು ಅಂದುಕೊಂಡನು. ಆ ಅಪರಾದವು ರಾಜಕೀಯಕ್ಕೆ ಸಂಬಂಧ ಪಡದೆ, ಧಾರ್ಮಿಕ ವಿಚಾರಕ್ಕೆ ಸಂಬಂಧ ಪಟ್ಟಿದ್ದರಿಂದ, ಆ ಸಮಸ್ಯೆಯನ್ನು ಪಟ್ಟಣದಲ್ಲಿದ ದೈವ ಶಾಸ್ತ್ರ ಪಂಡಿತರ ಮುಂದೆ ಇಡುವ ಸಾಧ್ಯತೆಯಿತ್ತು. "ಪೌಲನ ಮೇಲೆ ಯೆಹೂದ್ಯರು[8] ಯಾವ ತಪ್ಪು ಹೊರಿಸು ತ್ತಾರೆಂಬುವ ವಿಷಯದಲ್ಲಿ[9] ನಿಜವಾದ ಸಂಗತಿಯನ್ನು ತಿಳಿಯಬೇಕೆಂದು ಅಪೇಕ್ಷಿಸಿ ಸಹಸ್ರಾಧಿಪತಿಯು[10] ಮರುದಿನ ಅವನ ಬೇಡಿಗಳನ್ನು ಬಿಚ್ಚಿ ಮಹಾಯಾಜಕರೂ ಹಿರಿ ಸಭೆಯವರೆಲ್ಲರೂ[11] ಕೂಡಿ ಬರುವದಕ್ಕೆ ಅಪ್ಪಣೆಕೊಟ್ಟು ಪೌಲನನ್ನು ಕರೆದು ಕೊಂಡುಹೋಗಿ[12] ಅವರ ಮುಂದೆ ನಿಲ್ಲಿಸಿದನು"[13] (22:30).

ಪೌಲನು ಹಿಂದಿನ ದಿನದಲ್ಲಿ ದೇವಾಲಯದ ಆವರಣದಲ್ಲಿ, ಏಟು ಹೊಂದಿದ್ದರಿಂದ, ಅವನ ದೇಹದಲ್ಲಿ ಸಂಕಟವಾಗಿತ್ತು, ಆದರೆ ಯೆಹೂದ್ಯರ ಮಹಾಮಂಡಳಿಯ ಮುಂದೆ

ನೇರವಾಗಿ ನಿಂತುಕೊಂಡನು. ಸ್ತೆಫನನು, ಕರ್ತನಾದ ಯೇಸು ಕ್ರಿಸ್ತನು ಹಾಗೂ ಪೇತ್ರ ಯೋಹಾನರು ನಿಂತಿದ್ದ ಸ್ಥಳದಲ್ಲೇ ಪೌಲನೂ ಸಹ ನಿಂತಿದ್ದನು. ಕೆಲವಾರು ವರ್ಷಗಳ ಹಿಂದೆ ಪೌಲನು ಇಂತಹದೇ ಮಂಡಳಿಯ ಮುಂದೆ ಕುಳಿತುಕೊಂಡಿದ್ದನು;[14] ಈಗ ಅವನು ಅವರ ಮುಂದೆ ನಿಂತುಕೊಂಡು, ಅವರ ತಣ್ಣಗಾದ, ಕಠಿಣವಾದ ಮುಖಗಳನ್ನು ಗುರುತು ಹಿಡಿದರು,[15] ಕೆಲವರನ್ನು ಗುರುತು ಹಿಡಿಯಲಿಲ್ಲ.

ಹೇಗೂ, ಪೌಲನಿಗೆ ಮಾತನಾಡುವ ಅವಕಾಶ ದೊರೆಯಿತು.[16] ಅವನು ಕೈಸನ್ನೆ ಮಾಡುವ ಮೂಲಕ ಆಜನರೆಲ್ಲರ ಗಮನ ಸೆಳೆದನು (21:40); ಈಗ ಅವನು ಹಿರಿಸಭೆಯವರನ್ನು ದೃಷ್ಟಿಸಿದನು[17] (23:1ಎ), ಮತ್ತು ಸಹೋದರರೇ,[18] "ನಾನು ಈ ದಿನದವರೆಗೂ ಒಳ್ಳೆ ಮನಸ್ಸಾಕ್ಷಿಯಿಂದ[19] ದೇವರ ಮುಂದೆ ನಡೆದುಕೊಂಡಿದ್ದೇನೆ" ಎಂದು ಧೈರ್ಯದಿಂದ ಹೇಳಿದನು (23:1ಬಿ).[20] ಇನ್ನೊಂದು ಅರ್ಥದಲ್ಲಿ, "ನಾನು ನನ್ನ ಹೃದಯವನ್ನು ಬಲ್ಲವನಾಗಿರುವೆನು, ನನ್ನ ಮೇಲಿನ ಅರೋಪದ ಕುರಿತು ನಾನು ನಿರ್ದೋಷಿ ಎಂದು ಹೇಳಿದನು. ಈ ಯಾವ ಅಪರಾದವನ್ನು ನಾನು ಮಾಡಲಿಲ್ಲ ಎಂದು ಹೇಳಿದನು!"[21]

ಅದಕ್ಕೆ ಮಹಾಯಾಜಕನು "ಅವನ ಬಾಯ ಮೇಲೆ ಹೊಡೆಯಿರಿ ಎಂದು ಹತ್ತಿರದಲ್ಲಿರುವವರಿಗೆ ಅಪ್ಪಣೆ ನೀಡಿದನು" (23:2ಬಿ) - ಅವನನ್ನು ಸುಮ್ಮನಿರಿಸಲು ಹಾಗೂ ಶಿಕ್ಷೆಗಾಗಿ ಇದನ್ನು ಮಾಡಿದನು.[22] ಆ ಮಹಾಯಾಜಕನ ಹೆಸರು ಅನನೀಯನು (23:2ಎ).[23] ಇತಿಹಾಸ ತಜ್ಞರ ಪ್ರಕಾರ, "ಆ ಸ್ಥಾನವನ್ನು ಅಲಂಕರಿಸಲು ಅವನು ಅತಿ ಅಯೋಗ್ಯನಾಗಿದ್ದನು.[24] ಅವನು ಭಯಂಕರನಾದ ಹೊಟ್ಟೆಬಾಕನಾಗಿದ್ದನು, ಕಳ್ಳನು, ದೋಚುವವನು, ಮತ್ತು ರೋಮಾಯದಲ್ಲಿ ಕಳಂಕನು ಆಗಿದ್ದನು."[25]

ಆ ಹೊಡೆತವು ಪೌಲನನ್ನು ಸ್ಥಬ್ಧನನ್ನಾಗಿ ಮಾಡಲಿಲ್ಲ. ಅವನು ರಕ್ತವನ್ನು ಕಾರುತ್ತಿದ್ದರೂ, "ದೇವರು ನಿನ್ನನ್ನು ಹೊಡೆಯುವನು ಅಂದನು, ನೀವು ಸುಣ್ಣ ಹಚ್ಚಿದ ಗೋಡೆ ಅಂದನು. ನೀನು ಧರ್ಮಶಾಸ್ತ್ರನುಸಾರವಾಗಿ ನನ್ನ ವಿಚಾರಣೆ ಮಾಡುವದಕ್ಕೆ ಕೂತುಕೊಂಡು ಧರ್ಮಶಾಸ್ತ್ರ ವಿರುದ್ಧವಾಗಿ ನನ್ನನ್ನು ಹೊಡೆಯುವದಕ್ಕೆ ಅಪ್ಪಣೆ ಕೊಡುತ್ತಿಯೋ? ಅಂದನು" (23:3). ಅಪರಾಧ ಸಾಭೀತಾಗದ ಹೊರತು, ಅವನಿಗೆ ಶಿಕ್ಷೆ ವಿಧಿಸಬಾರದೆಂಬುದು ಧರ್ಮಶಾಸ್ತ್ರವು ಸ್ಪಷ್ಟವಾಗಿ ತಿಳಿಸುತ್ತದೆ (ಧರ್ಮೋಪದೇಶಕಾಂಡ 25:1, 2; ಯಾಜಕಕೊಂಡ 19:15).[26] ಮೌಖಿಕ ನಿಯಮವು ಸಹ, "ಇಸ್ರಾಯೇಲ್ಯರ ಕೆನ್ನೆಗೆ ಹೊಡೆಯುವವನು, ದೇವರ ಮಹಿಮೆಗೆ ಹೊಡೆಯುವವನಾಗಿರುತ್ತಾನೆ"[27] ಎಂದು ತಿಳಿಸುತ್ತದೆ.

"ಸುಣ್ಣ ಹಚ್ಚಿದ ಸಮಾಧಿ" ಎಂಬ ಪೌಲನ ಹೇಳಿಕೆಯು ಸಾಮಾನ್ಯವಾದ ಹೇಳಿಕೆಯೇ ಯೆಹೆಜ್ಕೇಲನು ಸುಳ್ಳು ಪ್ರವಾದಿಗಳನ್ನು ಬಿದ್ದು ಹೋದ ಸುಣ್ಣ ಹಚ್ಚಿದ ಗೋಡೆಗಳಿಗೆ ಹೋಲಿಸಿರುವನು (ಯೆಹೆಜ್ಕೇಲ 13:10-16). ಪೌಲನು ತನ್ನ ಹಿಂಸಕರನ್ನು ಕಪಟಿಗಳು ಎಂದು ಕರೆದಿರುವನು![28] (ದೇವರು ನಿನ್ನನ್ನು ಹೊಡೆಯುವನು ಎಂದು ಅನನೀಯನ ಕುರಿತ ಹೇಳಿಕೆಯ ಹತ್ತು ವರ್ಷಗಳ ನಂತರ ನೆರವೇರಿತು, ಯೆಹೂದ್ಯ ಅಭಿಮಾನಿಗಳು ಅವನನ್ನು ಕ್ರಿ.ಶ. 66ರಲ್ಲಿ ಸಂಹರಿಸಿದರು.[29])

ಪೌಲನ ಈ ತೀಕ್ಷ್ಣವಾದ ಮಾತುಗಳನ್ನು ಜನರು ಕೇಳಿ ಬೆಚ್ಚಿದರು. "ದೇವರು ನೇಮಿಸಿದ ಮಹಾಯಾಜಕನನ್ನು ಬಯ್ಯುತ್ತೀಯೇ?" ಎಂದು ಜನರು ಕೇಳಿದರು (23:4) ಆಗ ಪೌಲನು, "ಸಹೋದರರೇ ಮಹಾಯಾಜಕನೆಂದು ನನಗೆ ತಿಳಿಯಲಿಲ್ಲ. ನಿನ್ನ ಜನರಲ್ಲಿ ಅಧಿಪತಿಯಾಗಿರುವವನ ವಿಷಯವಾಗಿ ಕೆಟ್ಟದ್ದೇನು ಆಡಬಾರದೆಂದು ಬರೆದದೆಂದು ಬರೆದದೆಯಷ್ಟೆ ಅಂದನು" (23:5). ವಿಮೋಚನಕಾಂಡ 22:28ರ ಉಲ್ಲೇಖವಾಗಿದೆ. ಮತ್ತೊಂದು ಸಾರಿ ಪೌಲನು ಧರ್ಮಶಾಸ್ತ್ರಕ್ಕೆ ವಿರೋಧವಾಗಿ ಮಾತನಾಡದೆ ಅದಕ್ಕೆ ಗೌರವವನ್ನು ನೀಡಿದ್ದನು (ಅಪೊಸ್ತಲರ ಕೃತ್ಯಗಳು 21:28).

ಇದರ ಕುರಿತು ಪಂಡಿತರುಗಳು ಎರಡು ಪ್ರಶ್ನೆಗಳನ್ನು ಎದುರಿಸಿದರು. ಮೊದಲನೆಯದಾಗಿ

ಮಹಾಯಾಜಕನ ಬಳಿಯಲ್ಲಿ ಮಾನಾಡುತ್ತಿರುವದನ್ನು ಪೌಲನು ಏಕೆ ಅರಿಯಲಿಲ್ಲ? ಕೆಲವರ ಅಭಿಪ್ರಾಯದಂತೆ ಪೌಲನು ಮಂದ ದೃಷ್ಟಿವುಳ್ಳವನಾಗಿರಬಹುದು (ಗಲಾತ್ಯ 4:15; 6:11). ಮತ್ತೊಂದು ವಿಚಾರವೇನೆಂದರೆ ರೋಮಾಯರು ಈ ಸಭೆಯನ್ನು ಸೇರಿಸಿದ್ದರಿಂದ, ಅನನೀಯನು ತನ್ನ ನಿಯಮಿತ ಸ್ಥಾನದಲ್ಲಿ ಕುಳಿತಿರಲಿಲ್ಲ. ಎಂಬುದು ಇತರರ ಅಭಿಪ್ರಾಯವಾಗಿದೆ, ಮತ್ತು ಅವನು ತನ್ನ ಯಾಜಕ ವಸ್ತ್ರವನ್ನು ಸಹ ಧರಿಸಿರಲಿಲ್ಲ. ಪೌಲನು ಇಪ್ಪತ್ತು ವರ್ಷಗಳ ಕಾಲ ಯೆರೂಸಲೇಮಿನಲ್ಲಿ ಇಲ್ಲದೆ ಇದ್ದದ್ದರಿಂದ, ಮತ್ತು ಕೆಲವೇ ಸಂದರ್ಶನಗಳನ್ನು ಯೆರೂಸಲೇಮಿಗೆ ಮಾಡಿದ್ದರಿಂದ ಮಹಾಯಾಜಕನ ಮುಖ ಪರಿಚಯವೂ ಪೌಲನಿಗೆ ಇರಲಿಲ್ಲ ಎಂಬ ಅಭಿಪ್ರಾಯವೂ ಇದೆ.[30]

ಎರಡನೆಯ ಪ್ರಶ್ನೆಯು, ಮೊದಲನೆಯದಕ್ಕೆ ಸಂಬಂಧಪಟ್ಟದ್ದೆ: ಪೌಲನು ಪ್ರತಿವಾದ ಮಾಡುತ್ತಿದ್ದನೇ, ಅಥವಾ ಗೊಂದಲಕ್ಕೊಳಗಾಗಿ ಮಾತನಾಡಿದನೇ ಒಂದು ವೇಳೆ ಅವನು ಗೊಂದಲದಿಂದ ಮಾತನಾಡುತ್ತಿದ್ದರೆ, "ಅನನೀಯನನ್ನು ಮಹಾಯಾಜಕನೆಂದು *ಗುರುತು ಹಿಡಿಯಲು ಸಾಧ್ಯವಾಗುತ್ತಿರಲಿಲ್ಲ ಎಕೆಂದರೆ ಅವನ ವರ್ತನೆ ಸರಿಯಾದದ್ದಾಗಿರಲಿಲ್ಲ!*" ಎಂದು ಕೆಲವರ ಅಭಿಪ್ರಾಯವಿರಬಹುದು. ಪೌಲನ ಮಾತುಗಳನ್ನು, ನಾನು ವೈಯಕ್ತಿಕವಾಗಿ ಗಮನಿಸಿ, ಪೌಲನ ಮಾತುಗಳನ್ನು ಸ್ವಾಭಾವಿಕವಾದ, ಮಾತೆಂದೂ ತಿಳಿಯದೇ,[31] ವಿಮೋಚನೆ ಕಾಂಡದ ಉಲ್ಲೇಖದಿಂದ ಪೌಲನು ಪ್ರತಿವಾದದ ಮಾತನ್ನೇ ಆಡಿರುವನು.

ಪೌಲನ ಮಾನವ ಸ್ವಭಾವವನ್ನೇ ಲೂಕನು ತಿಳಿಸಿರುವನು, ನಮ್ಮ ಜೀವನದಲ್ಲಿ ಹಲವಾರು ಬಾರಿ ಇತರರ ಸಂಖ್ಯೆಗನುಗುಣವಾಗಿ ಕಾಣಿಸಿಕೊಳ್ಳುತ್ತೇವೆ ವಿನಃ ನಮ್ಮ ಕೆನ್ನೆಯನ್ನು ನಾವು ತಿರುಗಿಸುವದಿಲ್ಲ (ಮತ್ತಾಯ 5:39), ಸ್ವೀಕರಿಸಿದಂತೆ ನೀಡುತ್ತೇವೆ. ಪೌಲನು ತಪ್ಪೊಪ್ಪಿಗೆಯಲ್ಲಿ ಯಥಾರ್ಥತೆ ಇತ್ತು, ಈ ವಿಷಯದಲ್ಲಿ ಪೌಲನು ನಮಗೆ ನಿದರ್ಶನವಾಗಿರುವನು. ಆದರೂ ಪೌಲನು ಸತ್ಯವನ್ನು ಪ್ರತಿಪಾದಿಸಲಿಲ್ಲ ಎಂದು ಹೇಳುತ್ತಿರುವದಿಲ್ಲ (ಅವನ ಮಾತುಗಳು ಶೇಕಡ 100/ರಷ್ಟು ಸರಿಯಾಗಿದ್ದವು), ದೇವರಿಂದ ನೇಮಕವಾದವನಿಗೆ ವಿರೋಧವಾಗಿ ಮಾತನಾಡಿದನು, ಅದು ತಪ್ಪೆಂದು ಒಪ್ಪಿಕೊಂಡನು. ನಾವು ಸ್ಥಾನಕ್ಕೆ ಗೌರವ ನೀಡಬೇಕು.

ಈ ಹಿಂದೆ ಪೌಲನು ಹಿರಿಸಭೆಯ ಸಂಸರ್ಗದಲ್ಲಿದ್ದನು, ಆದದರಿಂದ, ಅವರು ಪೌಲನ ಕುರಿತು ಯೋಗ್ಯವಾಗಿ ಮಾತನಾಡಬಹುದು ಎಂದು ಅಪೇಕ್ಷಿಸಿದ್ದನು. ಅವನ ಬಾಯಿಯಲ್ಲಿದ್ದ ರಕ್ತದ ಉಪ್ಪಿನ ಅಂಶ, ಯಾಜಕನ ಮುಖದ ಮೇಲಿದ್ದ ದ್ವೇಷ,[32] ಮತ್ತು ಜನರಿಂದ ಉಂಟಾದ ಅತಿಯಾದ ಹಿಂಸೆ ಅವನು ಈ ರೀತಿ ಮಾತನಾಡುವಂತೆ ಮಾಡಿರಬಹುದು. ಅವನು ಆ ಮಹಾ ಸಭೆಯಿಂದ ಜೀವದಿಂದ ಹೊರಹೋಗಬೇಕಿತ್ತು.

ಹಿರಿ ಸಭೆಯ ಕ್ರಿಯೆಗಳನ್ನು ಪೌಲನು ಅರಿತವನಾಗಿದ್ದನು. ಅಲ್ಲಿ ಸದ್ದುಕಾಯರು ಹೆಚ್ಚಾಗಿದ್ದರೂ, ಅವರ ಸಂಗಡ ಫರಿಸಾಯರೂ ಇದ್ದರು - ಅವರು ಅಲ್ಪವಾಗಿದ್ದರು. ಈ ಎರಡು ಪಂಥಗಳ ನಡುವೆ ಇದ್ದ ಸಿದ್ಧಾಂತಗಳ ವ್ಯತ್ಯಾಸವನ್ನು ಪೌಲನು ಅರಿತ್ತಿದ್ದನು. ಅನೇಕ ವಾದವುಗಳಲ್ಲಿ, ಮೂರು ಪ್ರಮುಖ ವ್ಯತ್ಯಾಸಗಳಿವೆ: "ಸದ್ದುಕಾಯರು ಪುನರುತ್ಥಾನವಿಲ್ಲವೆಂದು ನಂಬುವರು,[33] ದೇವದೂತರಿರುವರೆಂದಾಗಲೀ, ಆತ್ಮವಿದೆ ಎಂದಾಗಲೀ; ಅವರು ನಂಬದೆ ಇದ್ದರೂ, ಫರಿಸಾಯರೂ ಇದನ್ನೆಲ್ಲಾ ನಂಬಿದ್ದರು" (23:8).[34] "ಸಭೆಯವರಲ್ಲಿ ಒಂದು ಪಾಲು ಸದ್ದುಕಾಯರೂ, ಇನ್ನೊಂದು ಪಾಲು ಪರಿಸಾಯರೂ[35] ಇರುವದನ್ನು ಪೌಲನು ತಿಳಿದು - ಸಹೋದರರೇ ನಾನು ಫರಿಸಾಯನು,[36] ಫರಿಸಾಯರ ಮಗನು;[37] ಸತ್ತವರೆದ್ದು ಬರುವರು ಎಂಬ ನಿರೀಕ್ಷೆಯ ವಿಷಯವಾಗಿ ನನ್ನನ್ನು ವಿಚಾರಣೆ ಮಾಡುತ್ತಾರೆ ಅಂದನು!"[38] (23:6).

ಕ್ರಿಸ್ತನ ಪುನರುತ್ಥಾನದ ವಿಚಾರದಲ್ಲಿ ಅರೋಪಮಾಡಿರಲಿಲ್ಲ (21:28), ಯೇಸುವಿನ ಪುನರುತ್ಥಾನದ ಕುರಿತು ಕ್ರೈಸ್ತರು ಸಾರುತ್ತಿದ್ದರಿಂದ, ಯೆಹೂದ್ಯರು ಸಿಟ್ಟುಗೊಂಡಿದ್ದರು

(ಗಮನಿಸಿ 4:2). "ಸತ್ತವರೆದ್ದು ಬರವರು ಎಂಬ ನಿರೀಕ್ಷೆಯ ವಿಚಾರವನ್ನು" ಪೌಲನು ಸಾರಿದ್ದರಿಂದ, ಅವನ ಮೇಲೆ ಅಪವಾದ ಎಸೆಗಿದ್ದರು, ಈಗ ಪೌಲನು ಸತ್ಯಸಂಗತಿಯನ್ನು ಬಹಿರಂಗವಾಗಿ ಹೇಳಿದನು. ಅವನ ವಿಚಾರಣೆಯ ಉದ್ದಕ್ಕೂ ಪುನರುತ್ಥಾನದ ವಿಷಯವೇ ಪ್ರಮುಖವಾಗಿತ್ತು (ಗಮನಿಸಿ 24:21; 26:6-8, 21-23; 28:20).

ತನ್ನ ಪದಗಳು ತೀಕ್ಷ್ಣವಾದ ಪರಿಣಾಮವನ್ನು ಬೀರಿತ್ತು ಎಂದು ಪೌಲನು ತಿಳಿದನೇ? ನಾವರಿಯೆವು,[39] ಆದರೆ ...

> ಇದನ್ನು ಅವನು ಹೇಳಿದಾಗ ಫರಿಸಾಯರಿಗೂ ಸದ್ದುಕಾಯರಿಗೂ ಜಗಳ ಹುಟ್ಟಿತು; ಸಭೆಯಲ್ಲಿ ಭೇದವುಂಟಾಯಿತು. ಯಾಕಂದರೆ - ಸತ್ತವರು ಎದ್ದು ಬರುವದಿಲ್ಲವೆಂತಲೂ ದೇವದೂತನಾಗಲಿ ದೇಹವಿಲ್ಲದ ಆತ್ಮವಾಗಲಿ ಇಲ್ಲವೆಂತಲೂ ಸದ್ದುಕಾಯರು ಹೇಳುವರು; ಆ ಎರಡೂ ಉಂಟೆಂದು ಫರಿಸಾಯರು ಒಪ್ಪಿಕೊಳ್ಳುವರು. ಆಗ ದೊಡ್ಡ ಕೂಗಾಟವಾಯಿತು. ಫರಿಸಾಯರ ಪಕ್ಷದವ ರಾದ ಶಾಸ್ತ್ರಿಗಳಲ್ಲಿ ಕೆಲವರು ಎದ್ದು - ಈ ಮನುಷ್ಯನಲ್ಲಿ ನಮಗೆ ಕೆಟ್ಟದ್ದೇನೋ ಕಾಣಬರುವದಿಲ್ಲ; ಆತ್ಮವಾಗಲಿ ದೇವದೂತನಾಗಲಿ ಅವನ ಸಂಗಡ ಮಾತಾಡಿದ್ದರೂ ಮಾತಾಡಿರಬಹುದು ಎಂದು ವಾಗ್ವಾದ ಮಾಡಿದರು[40] (23:7-9).

ಫರಿಸಾಯರ ಹೇಳಿಕೆಯಲ್ಲಿ ಅವರು ಪೌಲನ ಪರವಾಗಿಯೂ, ಸದ್ದುಕಾಯರಿಗೆ ವಿರೋಧವಾಗಿಯೂ ಇದ್ದರು ಎಂಬ ಸೂಚನೆ ಇರುವದಿಲ್ಲ - ಆದರೆ ಈ ವಿಷಯದಲ್ಲಿ ಅವರನ್ನು ವಿರೋಧಿಸಲು ಉತ್ಸುಕರಾಗಿದ್ದರು. ಎರಡು ಪ್ರಾಣಿಗಳು ರೋಷದಿಂದ ಪೌಲನನ್ನು ತಿಂದು ಬಿಡದಂತೆ, ಅವುಗಳನ್ನು ನಿರ್ದಿಷ್ಟವಾದ ಅಂತರದಲ್ಲಿ ತಳ್ಳಿ ಹಿಡಿದಿರುವಂತೆ ಪೌಲನ ಮಾತುಗಳು ಬಲಪ್ರದವಾಗಿದ್ದವು.[41]

ಇನ್ನೊಂದು ಸಾರಿ ಹಿರಿಸಭೆಯಲ್ಲಿ ಗೊಂದಲ ಉಂಟಾಯಿತು (ಗಮನಿಸಿ 7:54-58). ರೋಮಾಯರ ಸಮ್ಮುಖದಲ್ಲಿ, ವಯಸ್ಸಾದ ಯೆಹೂದ್ಯರು ತಮ್ಮ ಗೌರ ವಾನ್ವಿತ ವಸ್ತ್ರಗಳನ್ನು ಧರಿಸಿದವರಾಗಿ ಪರಸ್ಪರ ಕೂಗಿಕೊಂಡರು. ಅಲ್ಲಿ ಪೌಲನೇ ಕೇಂದ್ರ ವ್ಯಕ್ತಿಯಾಗಿದ್ದನು. ಒಂದು ಭಾಗದಲ್ಲಿ ಸದ್ದುಕಾಯರು ಪೌಲನನ್ನು ಕೊಲ್ಲಲು ಇಚ್ಚಿಸಿದ್ದರು. ಇನ್ನೊಂದೆಡೆ ಫರಿಸಾಯರು ಅವನನ್ನು ಮೊಲೆಯುಣಿಸುತ್ತಿದ್ದ ತಾಯಿಯಿಂದ ಬಲಾತ್ಕಾರವಾಗಿ ಸೆಳೆದುಕೊಂಡು ಹೋದ ಮಗುವಿನ ಹಾಗೆ ಬಿಡಿಸಿ ಬಿಡಬೇಕೆಂದು ತವಕಿಸುತ್ತಿದ್ದರು.

ಅವನನ್ನು ಉಳಿಸಲು, ರೋಮಾಯದ ಅಧಿಕಾರಿಯು ಮೂರನೆಯ ಸಾರಿ ಮುಂದಾದನು. "ಅವರು ಪೌಲನನ್ನು ಎಳೆದು ಚೂರು ಚೂರು ಮಾಡರೆಂದು ಸಹಸ್ರಾಧಿಪತಿಯು ಭಯಪಟ್ಟನು" (23:10ಎ). ಸಿಪಾಯಿಗಳಿಗೆ, "ನೀವು ಹೋಗಿ ಅವರ ಮಧ್ಯದಿಂದ ಅವನನ್ನುಬಲವಂತವಾಗಿ ಹಿಡಿದು ಕೋಟೆಯೊಳಗೆ ತರಬೇಕೆಂದು ಆಜ್ಞೆಕೊಟ್ಟನು" (23:10ಬಿ).

## ಒಂದು ದೈವೀಕ ಆಚರಣೆ (23:11)

ಆ ರಾತ್ರಿ ಪೌಲನು ಒಂಟಿಗನಾಗಿ ಸೆರೆಮನೆಯ ಕೊಠಡಿಯಲ್ಲಿರುವಾಗ, ಅವನು ನಿರಾಶನಾಗಿಯೂ, ಬಾರವಾದ ಹೃದಯದಲ್ಲಿಯೂ ಇದ್ದನು. ಅವನ ಕ್ರಿಯಾತ್ಮಕ ಸೇವೆಯ ಅಂತ್ಯವು ಸಮೀಪವಾಗಿ, ಅವನು ರೋಮಾಪುರವನ್ನು ಸೇರುವದಿಲ್ಲವೆಂದು ನಿರ್ಣಯಿಸಿಕೊಂಡಿದ್ದನು. ಹೇಗೂ, ಅವನು ಕೈಬಿಡಲ್ಪಡಲಿಲ್ಲ. "ಆ ದಿನದ ರಾತ್ರಿ ಕರ್ತನು ಪೌಲನ ಬಳಿಯಲ್ಲಿ ನಿಂತುಕೊಂಡು - ಧೈರ್ಯದಿಂದಿರು; ನೀನು ಯೆರೂಸಲೇಮಿನಲ್ಲಿ ನನ್ನ ಸಂಗತಿಯನ್ನೆಲ್ಲಾ ಸಾಕ್ಷಿಯಾಗಿ ಹೇಳಿದಂತೆಯೇ ರೋಮಾಪುರದಲ್ಲಿಯೂ ಸಾಕ್ಷಿ ಹೇಳಬೇಕಾಗುವದು ಅಂದನು" (ವಚನ 11). ಈ ಅದ್ಭುತದ ಕುರಿತು ಮುಂದುವರಿಯುವ ಮೊದಲು, ಯೆರೂಸಲೇಮಿನಲ್ಲಿ ಪೌಲನಿಗೆ ಉಂಟಾದ ತಿರಸ್ಕಾರದ ಕುರಿತು ಇನ್ನೊಂದು ನಿದರ್ಶನವನ್ನು ನೋಡಿಕೊಳ್ಳೋಣ.

## ಒಂದು ದೃಢವಾದ ಒಳಸಂಚು (23:12-15)

ನಾವು 23:12-15: ಓದಿದಂತೆ,

> ಬೆಳಗಾದ ಮೇಲೆ ಯೆಹೂದ್ಯರು ಒಳಸಂಚು ಮಾಡಿ - ನಾವು ಪೌಲನನ್ನು ಕೊಲ್ಲುವ ತನಕ ಅನ್ನಪಾನವೇನೂ ಮುಟ್ಟುವದಿಲ್ಲವೆಂದು ಶಪಥ ಮಾಡಿಕೊಂಡರು. ಹೀಗೆ ಮಾಡಿದವರು ನಾಲ್ವತ್ತು ಮಂದಿಗಿಂತ ಹೆಚ್ಚಾಗಿದ್ದರು. ಇವರು ಮಹಾಯಾಜಕರ ಮತ್ತು ಸಭೇಹಿರಿಯರ ಬಳಿಗೆಹೋಗಿ - ನಾವು ಪೌಲನನ್ನು ಕೊಲ್ಲುವ ತನಕ ಬಾಯಲ್ಲಿ ಏನೂ ಹಾಕುವದಿಲ್ಲವೆಂದು ಕಠಿನ ಶಪಥವನ್ನು ಮಾಡಿಕೊಂಡಿದ್ದೇವೆ. ಆದದರಿಂದ ನೀವು ಸಭೆಯವರ ಸಹಿತ ಸಹಸ್ರಾಧಿಪತಿಯ ಬಳಿಗೆ ಹೋಗಿ ಪೌಲನ ಸಂಗತಿಯನ್ನು ಇನ್ನೂ ಸೂಕ್ಷ್ಮವಾಗಿ ವಿಮರ್ಶೆಮಾಡಬೇಕೆಂದು ನೆವಹೇಳಿ ಅವನನ್ನು ಕೋಟೆಯಿಂದ ನಿಮ್ಮ ಬಳಿಗೆ ಕರೆದು ಕೊಂಡು ಬರುವ ಹಾಗೆ ಕೇಳಿಕೊಳ್ಳಬೇಕು. ನಾವಾದರೋ ಅವನು ಹತ್ತರ ಬರುವದಕ್ಕಿಂತ ಮುಂಚೆಯೇ ಅವನನ್ನು ಕೊಲ್ಲುವದಕ್ಕೆ ಸಿದ್ಧವಾಗಿದ್ದೇವೆ ಅಂದರು.

ವಚನ 20ರಲ್ಲಿ ಯೆಹೂದ್ಯರು ಪೌಲನ ಸಂಗತಿಯನ್ನು ಇನ್ನೂ ಸೂಕ್ಷ್ಮವಾಗಿ ವಿಚಾರಣೆ ಮಾಡಬೇಕೆಂಬ ನೆವ ಹೇಳಿದರು. ವಾರೆನ್ ವೆರ್ಸ್ಬಿಯವರು, "ಒಬ್ಬ ದೈವ ಭಕ್ತನಾದ ಯೆಹೂದಿಯನ್ನು ಧಾರ್ಮಿಕ ಹಿನ್ನೆಲೆಯ ಕಾರಣದಿಂದ, ನಾಲ್ವತ್ತು ಜನರು ಒಗ್ಗೂಡಿ ಕೊಲ್ಲಬೇಕೆಂಬ ಯೋಜನೆಯ ನಿಮಿತ್ತ ಯೆರೂಸಲೇಮು ದೇವರಿಂದ ಬಹು ದೂರವಾಗಿತ್ತು ಎಂದು ನೋಡುತ್ತೇವೆ" ಮತ್ತು ಈ ಒಳಸಂಚಿನಲ್ಲಿ ಮಹಾಯಾಜಕರೂ "ಹಾಗೂ ಹಿರಿಯರು ಸಹ ಸೇರಿಕೊಂಡಿದ್ದರು!"[42] ಅಧ್ಯಾಯ 21 ರಿಂದ 23 ರವರೆಗೆ, ಧಾರ್ಮಿಕ ಯೆಹೂದ್ಯನಾಯಕರಲ್ಲಿದ್ದ ಮೋಸ ಮತ್ತು ನಾಶನದ ನಡುವೆ ಅಡಗಿದ್ದ ಸತ್ಯವನ್ನು ಅರಿಯಲು ಅನ್ಯನಾದ ಕ್ಲೌದ್ಯಲೂಸನು ಪ್ರಯತ್ನಿಸಿದ ವ್ಯತ್ಯಾಸವನ್ನು ಗಮನಿಸುತ್ತೇವೆ.

ನಂತರ, ಪೌಲನು ಹೇಗೆ ಅವರ ಬಲೆಯಿಂದ ತಪ್ಪಿಸಿಕೊಂಡನು ಎಂಬುದನ್ನು ನೋಡೋಣ. ಆದರೆ ಸುವಾರ್ತೆಯು ಅವರ ಹೃದಯವನ್ನು ಸ್ಪರ್ಷಿಸುವದಿಲ್ಲವೆಂದು ಯೆಹೂದ್ಯರು ನಿರೂಪಿಸಿದರು. "ನಿತ್ಯ ಜೀವಕ್ಕೆ ಅಪಾತ್ರರೆಂದು ತಮಗೆ ತಾವೇ ತೀರ್ಪು ಮಾಡಿಕೊಂಡರು" (ನೋಡಿರಿ 13:46).

## ಮುಕ್ತಾಯ

ಯೆರೂಸಲೇಮಿನಲ್ಲಿ ಉಂಟಾದ ಅಂತಿಮವಾದ ತಿರಸ್ಕಾರದ ಬಗ್ಗೆ ಸ್ಪಷ್ಟವಾಗಿ ನೋಡಿ ಕೊಂಡೆವು. ಪ್ರತಿಫಲವಾಗಿ ಯೆರೂಸಲೇಮು ರೋಮಾಯರಿಂದ ನಾಶನ ವಾಯಿತು (ಲೂಕ 21:20). ಯೆರೂಸಲೇಮ ದೇವರ ನಿತ್ಯವಾದ ಯೋಜನೆಯಿಂದ ಕೈಬಿಡಲ್ಪಟ್ಟಿತು. ಯೇಸು ಸಮಾರ್ಯದ ಸ್ತ್ರೀಗೆ: "ಆ ಕಾಲದಲ್ಲಿ ನೀವು ತಂದೆಯನ್ನು ಆರಾಧಿಸಬೇಕಾದರೆ ಈ ಬೆಟ್ಟಕ್ಕೂ ಹೋಗುವದಿಲ್ಲ, ಯೆರೂಸಲೇಮಿಗೂ ಹೋಗುವದಿಲ್ಲ (ಗೆರೆಜೇಮ) ಅಂದನು" (ಯೋಹಾನ 4:21). "ಚೀಯೋನ್ ಪರ್ವತಕ್ಕೂ ಜೀವಸ್ವರೂಪನಾದ ದೇವರ ಪಟ್ಟಣವಾಗಿರುವ ಪರಲೋಕದ ಯೆರೂಸಲೇಮಿಗೂ, ... ಬಂದಿರುವಿರಿ" (ಇಬ್ರಿಯ 12:22), ಇನ್ನೊಂದು ಅರ್ಥದಲ್ಲಿ, ಯೇಸು ಆಡಳಿತ ನಡೆಸುವ ಆತನ ರಾಜ್ಯಕ್ಕೆ ಬಂದಿರುವೆವು.

ಈ ಪಾಠದಿಂದ ಅನೇಕ ಸತ್ಯಗಳನ್ನು ತಿಳಿಯಬಹುದು. ಸಾವಿರ ವರ್ಷಗಳ ಹಿಂದಿನ ಜೀವಿತದ ಬಗ್ಗೆ ನಂಬಿಕೆ ಇಟ್ಟಿರುವ ಸ್ನೇಹಿತರುಗಳು, ಭೌಗೋಳಿಕವಾದ ಯೆರೂಸಲೇಮು ಭೂಮಿಯ ಮೇಲೆ ಪುನಃ ಸ್ಥಾಪನೆಗೊಳ್ಳುತ್ತದೆ ಎಂದು ನಂಬಿರುವ ಅವರ ಕಲ್ಪನೆಯು ತಪ್ಪಾದದ್ದೇ, ಮತ್ತು ಒಂದು ದಿನ ಅದುಪುನ ಧಾರ್ಮಿಕ ಕೇಂದ್ರವಾಗುತ್ತದೆ ಎಂದು ತಿಳಿಯುವದು ತಪ್ಪೇ. ದೇವರನ್ನು ನಾವು ನಿರಾಕರಿಸುವದರಿಂದ ನಾಶವಾಗುವದು ಸತ್ಯ

ಸಂಗತಿಯೇ. ಜ್ಞಾನಿಯು ಹೇಳಿದ್ದೇನೆಂದರೆ, "ಬಹಳವಾಗಿ ಗದರಿಸಿದರೂ ತಗ್ಗದವನು ಏಳದ ಹಾಗೆ ಫಕ್ಕನೆ ಮುರಿದು ಬೀಳುವನು" (ಜ್ಞಾನೋಕ್ತಿ 29:1).[43] ಸುವಾರ್ತೆಯನ್ನು ಕೇಳಿ ಸ್ವೀಕರಿಸುವ ಅಥವಾ ನಿರಾಕರಿಸುವ ಅವಕಾಶವನ್ನುದೇವರು ನಿನಗೆ ನೀಡುವಾಗ, ನೀನು ಆ ಅವಕಾಶವನ್ನು ಸ್ವೀಕರಿಸಬಹುದು ಅಥವಾ ನಿರಾಕರಿಸ ಬಹುದು. ದೇವರ ಮಾರ್ಗವನ್ನು ಗೌರವಿಸುವದರಿಂದ, ನಿನಗೆ ಬಿಡುಗಡೆ ಹಾಗೂ ಆನಂದ ಉಂಟಾಗುತ್ತದೆ; ತಿರಸ್ಕರಿಸುವ ಪರಿಣಾಮ ಅಪಾಯ ಮತ್ತು ನಾಶನವೇ. ದೇವರನ್ನು ತಿರಸ್ಕರಿಸುತ್ತಾ ಮುಂದುವರಿಯುವದಾದರೆ, ಅದು ದೇವರಿಗೆ ಮಾಡಿದ ಅಪಹಾಸ್ಯವಾ ಗಿದೆ, ಆದರೆ ದೇವರು ಅಪಹಾಸ್ಯವನ್ನು ತಿರಸ್ಕರಿಸುತ್ತಾನೆ (ಗಲಾತ್ಯ 6:7)! ನೀವು ಇನ್ನೂ ದೇವರ ಯೋಜನೆಯನ್ನು ನಿರಾಕರಣೆ ಮಾಡುತ್ತಿದ್ದರೆ, ಇನ್ನೆಂದಿಗೂ ತಿರಸ್ಕರಿಸಬೇಡಿರಿ ಎಂದು ನಾನು ಬೇಡುತ್ತೇನೆ.

---

ಟಿಪ್ಪಣಿಗಳು

[1]ಯೇಸುವಿನ ಬರೋಣದ ಕುರಿತ ಕಡೇಯ ಹೇಳಿಕೆ. [2]ಲೂಕ 13:34, 35ರಲ್ಲಿ ಮೂಲ ಪದಗಳಿವೆ. ಲೂಕ 23 ಇತರೆ ಸನ್ನಿವೇಶದಲ್ಲಿ ಹೇಳಿರಬಹುದು. [3]George E. Ladd, *The Young Church: Acts of the Apostles* (Nashville: Abingdon Press, 1964), 78. [4]Ibid., 79. [5]George E. Ladd, *Acts,* The Wycliffe Bible Commentary (Nashville: The Southwestern Company, 1962), 1164. [6]Bobby Duncan, "Paul in the Temple and in Prison at Jerusalem," *Studies in Acts* (Denton, Tex.: Valid Publications, 1985), 199-200. [7]Warren W. Wiersbe, *Wiersbe's Expository Outlines on the New Testament* (Wheaton, Ill.: Victor Books, 1992), 341. [8]ಪೌಲನು ಸೆರೆವಾಸಿಯಾದಾಗ, ಶತಾಧಿಪತಿಯ ಹತೋಟಿ ಇರಲಿಲ್ಲ ಎಂಬುದಾಗಿರುವದಿಲ್ಲ ಅವನನ್ನು ಸೆರೆ ಕೊಠಡಿಯಿಂದ ತಂದಿದ್ದನು. [9]*ಅಪೊಸ್ತಲರ ಕೃತ್ಯಗಳು, 1ನೇ* ಟಿಪ್ಪಣಿ ನೋಡಿರಿ. [10]*ಅಪೊಸ್ತಲರ ಕೃತ್ಯಗಳು, 1ನೇ* ಸಭೆಯನ್ನು ನೋಡಿರಿ.

[11]ಹಿರಿ ಸಭೆಯನ್ನು ರೋಮಾಯರ ಅಧಿಕಾರ ಕೆಳಗಿದ್ದರಿಂದ, ಅವರಿಗೆ ಅಪ್ಪಣೆ ನೀಡುವ ಅಧಿಕಾರ ಅವನಿಗಿತ್ತು. [12]ಅಂತೋನಿಯ ಕೋಟೆಯ ಗೋಪುರವನ್ನು ಹೊಂದಿತ್ತು, ಅನ್ಯರ ಅಂಗಳದ ಮೂಲಕ ಹಾದು ಹೋಗಬೇಕಿತ್ತು (21:31, 35, 40). ಪೌಲನನ್ನು ಕೆಳಕ್ಕೆ ಕರೆ ತಂದರು. [13]ಆ ಕೂಟ ಅಧಿಕೃತ ಅಥವಾ ಅನಧಿಕೃತ ಎಂಬುದನ್ನು ಅರಿಯೆವು. ನಿರ್ದಿಷ್ಟ ಸ್ಥಳದ ಬಗ್ಗೆ ತಿಳಿದಿರುವದಿಲ್ಲ. ಅಧಿಕಾರಿಯು ಸಭೆಯಲ್ಲಿದ್ದನು (23:10). ಪೌಲನು ತಪ್ಪಿಸಿಕೊಳ್ಳದಂತೆ ನೋಡಿಕೊಳ್ಳುವದು ಅಧಿಕಾರಿಯ ಹೊಣೆಯಾಗಿತ್ತು (12:18, 19; 16:27). ಅಧಿಕಾರಿಯು ಇದ್ದದ್ದರಿಂದ, ಸಭೆಯು ಪರಿಶುದ್ಧ ಸ್ಥಳದಲ್ಲಿ ಜರುಗಲಿಲ್ಲ. [14]ಪೌಲನು ಹಿರಿಯ ಸಭೆಯ ಸದಸ್ಯನಾಗಿದ್ದನು ಎಂಬುದಕ್ಕೆ ಖಾತರಿ ಇಲ್ಲದಿದ್ದರೂ ಸ್ತೆಫನನ ಸಮಯದಲ್ಲಿ, ಪೌಲನು ಅವರೊಂದಿಗಿದ್ದನು. [15]ಹಿರಿ ಸಭೆಯಲ್ಲಿ, ಇಪ್ಪತ್ತು ವರ್ಷಗಳ ಹಿಂದೆ ಇದ್ದವರೂ, ಇನ್ನೂ ಜೀವಂತವಾಗಿರಬಹುದು ಆ ಕಾಲದ ಯೌವನಸ್ಥರನ್ನು ಸದಸ್ಯರನ್ನಾಗಿ ಮಾಡಿಕೊಂಡಿರಬಹುದು. [16]ಸಭೆಯಲ್ಲಿ, ಅವನ ಅಪರಾದವನ್ನು ಓದಿ ಹೇಳಬೇಕಿತ್ತು, ಯೇಸುವನ್ನು ಹಾಗೂ ಅಪೊಸ್ತಲರನ್ನು ವಿಚಾರಿಸುವಾಗ ಅಲ್ಲಿ ಯಾವ ಅಪರಾಧವೂ ಇರಲಿಲ್ಲ. ಅಪರಾಧಿಯ ಮಾತುಗಳಿಂದ ತಪ್ಪನ್ನು ಹಡುಕಲು ಯತ್ನಿಸಿದರು. ಅವನ ಮಾತಿನಿಂದಲೇ ಅವನನ್ನು ತಪಿತಸ್ಥನನ್ನಾಗಿ ಮಾಡಲು, ಅವನು ಮತನಾಡುವಂತೆ ಅವಕಾಶ ನೀಡಿದರು. ಅವನು ದೇವಾ ಲಯವನ್ನು ಅಶುದ್ಧ ಮಾಡಿದನು ಎಂಬ ಅರೋಪವಿತ್ತು (21:28) ಆದರೆ ಅದು ಯೋಗ್ಯವಾದ ಕಾರಣವಾಗಿರಲಿಲ್ಲ. [17]ಗದ್ದಲ ಮಾಡುವವರ ಗಮನ ಸೆಳೆಯುವ ಕ್ರಮ. [18]ಯೆಹೂದ್ಯರೊಂದಿಗೆ ಪೌಲನು ಓಲಿಸಿಕೊಂಡನು. ಅವರನ್ನು ಸಹೋದರರರೇ ಮತ್ತು ತಂದೆಗಳೇ ಎಂದು ಸಂಬೋಧಿಸಿ, ಅವಮಾನ ಮಾಡಿದನು ಎಂಬ ಅಭಿಪ್ರಾಯವಿದೆ (7:2). ಯಾರ ಕೈಯಲ್ಲಿ ಪೌಲನ ಜೀವವಿತ್ತು ಅವರಿಗೆ ಅಸಂತೃಪ್ತಿ ಉಂಟುಮಾಡಿತು. [19]"ನಾನು ಈಗಾಗಲೇ ಜೀವಿಸಿದ್ದೇನೆ" ಎಂಬ ಗ್ರೀಕ್ ಅರ್ಥ, ಇದರಿಂದಲೇ "ರಾಜಕೀಯ" ಉದ್ಭವಿ ಸಿದೆ ಎಂಬ ಶಬ್ಧ ಅವನು "ಹಕ್ಕುದಾರನಾಗಿ ಜೀವಿಸಿದ್ದನು" ಎಂಬ ಅರ್ಥ. ಪೌಲನು ನಿಯಮವನ್ನು ಮೀರದೆ ಯೆಹೂದ್ಯ ಜೀವಿತವನ್ನು ಜೀವಿಸಿದ್ದನು ಎಂಬ ಅರ್ಥ. [20]24:16; 2 ಕೊರಿಂಥ 1:12; 1 ತಿಮೊಥೆ 3:9 ಪೌಲನು ತಾನು ಪಾಪ ರಹಿತನು ಎಂದು ಹೇಳಲಿಲ್ಲ. ಮನಸ್ಸಾಕ್ಷಿಯು ಸರಿಯಾದ ಮಾರ್ಗದರ್ಶನ ನೀಡುತ್ತದೆ - ಅವನು ಸ್ಪಷ್ಟ ಬೋಧನೆ ಹೊಂದಿದ್ದನು ಎಂಬ ಅರ್ಥವಾಗಿದೆ. ಅವನು

ಬೋಧಿಸಿದಂತೆ ಜೀವಿಸಿದ್ದನು. ಕ್ರೈಸ್ತರನ್ನು ಹಿಂಸಿಸುವಾಗಲು ದೇವರ ಕಾರ್ಯವನ್ನೇ ಮಾಡಿದನೆಂದು ಭಾವಿಸಿದ್ದಾನೆ (26:9). ಮನಸ್ಸಾಕ್ಷಿಯಿಂದ ಜೀವಿಸುವದು, ಸೇವೆಗೆ ಸಾಕಾಗುವದಿಲ್ಲ.

[21]ಅವನು ಎಲ್ಲಿಂದ ಹೊರ ತಳ್ಳಲ್ಪಟ್ಟನೋ, ಅಲ್ಲಿಂದಲೇ ಜನರೊಂದಿಗೆ ಮಾತನಾಡುತ್ತಿದ್ದು ಅದನ್ನು ಹಿರಿಸಭೆಯ ಸದಸ್ಯರು ಕೇಳಿಸಿಕೊಂಡಿರಬಹುದು. [22]ಪೌಲನಿಗೆ ಉತ್ತರ ಹೇಳುವ ಬದಲು, ಮಹಾಯಾಜಕನು ಹೊಡೆಯುವಂತೆ ಹೇಳಿದನು - ಯಾಕಂದರೆ ಶಿಕ್ಷೆಗೆ ಪೌಲನಲ್ಲಿ ಯಾವ ಅಪರಾಧವೂ ಇರಲಿಲ್ಲ. ಯೇಸುವಿನ ವಿಚಾರಣೆಯ ಸಮಯದಲ್ಲಿ ಆತನ ಬಾಯಿಯ ಮೇಲೆ ಹೊಡೆದಿದ್ದರು (ಯೋಹಾನ 18:22). [23]4:6ರ ಅನನೀಯನ ಕುರಿತು ಗೊಂದಲ ಬೇಡ, ಅಪೊಸ್ತರ ಕೃತ್ಯದಲ್ಲಿ ಈ ಹಿಂದೆ ಸಂಧಿಸಿದ ಅನನೀಯದಲ್ಲಿ (ಅಪೊಸ್ತಲರ ಕೃತ್ಯಗಳು 5:1; 9:10). [24]ತನ್ನ ಸ್ವಂತ ಯಾಜಕರಿಂದಲೇ ದಶಮಾಂಶವನ್ನು ಕದ್ದುಕೊಳ್ಳುತ್ತಿದ್ದನು. ಜನರನ್ನು ಕೊಂದಿದ್ದರಿಂದ ಅಧಿಕಾರದಲ್ಲಿ ಮುಂದುವರಿದನು. [25]William Barclay, *The Acts of the Apostles,* The Daily Study Bible Series, rev. ed. (Philadelphia: Westminster Press, 1976), 164. [26]ಇಬ್ರಿಯ 5:1, 2 ಯಾಜಕನ ವರ್ತನೆಯ ಕುರಿತಾಗಿದೆ. [27]Barclay, 164. [28]ಫರಿಸಾಯರ ಕುರಿತು "ಸುಣ್ಣ ಹಚ್ಚಿದ ಸಮಾಧಿಯ" ಹೇಳಿಕೆಗೆ ಹೋಲಿಸಿ (ಮತ್ತಾಯ 23:27). [29]ವಚನ 3ರ ಆಧಿ ಭಾಗವನ್ನು ಪೌಲನು ಪ್ರೇರಿತನಾಗಿ ಮಾತನಾಡಿದನೇ? ವಚನ 3ರ, ಅಂತ್ಯದಲ್ಲಿ ಪೌಲನು ತಪ್ಪೊಪ್ಪಿಕೊಂಡದ್ದು ಪ್ರೇರಣೆಯಿಂದಲೇ? ನಿರ್ಣಯ ಕಷ್ಟಕರವೇ ಪೌಲನು ಸಾಮಾನ್ಯ ಸತ್ಯವನ್ನು ಹೇಳಿ, ಅವಿಧೇಯರನ್ನು ದೇವರು ನಾಶಮಾಡುವನು, ವಾಕ್ಯ ತಿಳಿದವರಿಗೆ ಇದು ತಿಳಿದ ವಿಚಾರ. [30]ವಿವರಣೆ ತಿಳಿದಿರುವದಿಲ್ಲ. ಪೌಲನು ಇತರೆ ಮೂಲದಿಂದ ಗಮನಿಸಿದ್ದನು. ಯಾಜಕನು ನೀಡಿದ ಆಜ್ಞೆಯನ್ನು ಅವನು ಗಮನಿಸಲಿಲ್ಲ.

[31]ಅನನೀಯನು ಯೋಗ್ಯವಾದ ಯಾಜಕನಾಗೆ ಇದ್ದದ್ದರಿಂದ, ಪೌಲನು ಅವನನ್ನು ಒಪ್ಪಿಕೊಳ್ಳಲಿಲ್ಲ. ದೇವರು ಒಬ್ಬನನ್ನು ನೇಮಿಸಿರುವಾಗ, ಯೋಗ್ಯತೆಯ ಪ್ರಶ್ನೆ ಉದ್ಭವಿಸುವದಿಲ್ಲ. [32]ಕೈಸರೈಯದಲ್ಲಿಯೂ ಈ ವಿಧವಾದ ದ್ವೇಷವನ್ನು ನೋಡುತ್ತೇನೆ (24:1; ಇದನ್ನು ನೋಡಿರಿ 25:2, 3). [33]ನೋಡಿರಿ ಲೂಕ 20:27. [34]ಫರಿಸಾಯರು ಮತ್ತು ಸದ್ದು ಕಾಯರ ಕುರಿತು ಅಪೊಸ್ತಲರ *ಅಪೊಸ್ತಲರ ಕೃತ್ಯಗಳು, 1ನೇ* ನೋಡಿರಿ. [35]ಸಭೆಯಲ್ಲಿ ಗದ್ದಲವಿದ್ದರಿಂದ, ಪೌಲನು ಶಬ್ದವಾಗಿ ಮಾತನಾಡಿದನು. [36]"ನಾನು ಫರಿಸಾಯನು" ಎಂಬ ಪೌಲನ ಹೇಳಿಕೆಗೆ ವಿರೋಧವಿದೆ (1) ಯೇಸು ವಿರೋಧಿಸಿದ ಫರಿಸಾಯರ ತತ್ವಗಳನ್ನು ಪೌಲನು ಹೊಂದಿರಲಿಲ್ಲ. (2) ಈ ವಿಧವಾಗಿ ಅವನು ಬೆಳೆ ದಿದ್ದನು (26:5). ಅದನು ಸಹ ಅವನು ನಿರಾಕರಿಸಿದ್ದನು (ಫಿಲಿಪ್ಪಿ 3:1-11), ಆದರೆ ಅದು ಅವನ ಹಿನ್ನೆಲೆಯಾಗಿತ್ತು. "ನಾನು" "ಕೇಶಿ" (ಓಕ್ಲಹೋಮದವನು). [37]"ಮಗನು" ಅಂದರೆ "ಭಾಗ ತೆಗೆದು ಕೊಂಡಿರುವವನು"; ಪೌಲನ ಮೂಲ ಪಿತೃಗಳು ಫರಿಸಾಯರಿರಬಹುದು. NIV ನೋಡಿರಿ. [39]ಯೇಸುವಿನ ಪುನರುತಾಥನ ಪೌಲನ ಸುರಕ್ಷೆಗಾಗಿ ದೇವರು ಇದನ್ನು ಮಾಡಿದನು. [40]ಅವರು ಪೌಲನಿಗೆ ವಿರುದ್ಧವಾಗಿದ್ದರೂ, "ಅವನಲ್ಲಿ ಯಾವ ತಪ್ಪು ಇರಲಿಲ್ಲ," ಅವನು ಪರಲೋಕ ದರ್ಶನವನ್ನು ಪಡೆದಿರಬಹುದು. ವಚನ 9ರ ಅಂತ್ಯದಲ್ಲಿ KJV "ನಾನು ದೇವರಿಗೆ ವಿರೋಧವಾಗಿ ಹೋರಾಡಬಾರದು" ಎಂಬ ಹೇಳಿಕೆ ಇರಬಹುದು. ಇದು ಗ್ರಂಥಗಳಲ್ಲಿರುವದಿಲ್ಲ (5:39).

[41]ಈ ಉಪಾಯವು ಹೊಳೆದ ನಂತರ J. W. McGarvey, *New Commentary on Acts of Apostles,* vol. 2 (Delight, Ark.: Gospel Light Publishing Co., n.d.), 226. [42]Wiersbe, 343. [43]ಇದನ್ನು ನೋಡಿರಿ ಜ್ಞಾನೋಕ್ತಿ 6:12-15; ರೋಮಾಪುರ 1:24, 26, 28 ಮತ್ತು ಇಬ್ರಿಯ 6:6.